# ಆಹಾ ಸುದ್ದಿ!

★ ಸಸಿತೋಟ



ಬರ್ಲಿನ್‌ನಲ್ಲಿ ಮ್ಯಾಡಂ ಟುಸ್ಸಾಡ್ಸ್ ಮೇಣದ ವಸ್ತು ಸಂಗ್ರಹಾಲಯದಲ್ಲಿ ಹೊಸ ಆಕರ್ಷಣೆಯೆಂದರೆ ಕಲಾವಿದನೊಬ್ಬ ಅಮೆರಿಕದ ಅಧ್ಯಕ್ಷ ಟ್ರಂಪ್‌ನಂತೆ ಮುಖವಾಡ ತೊಟ್ಟು ಜರ್ಮನಿಯ ಚಾನ್ಸ್‌ಲರ್ ಏಂಜೆಲಾ ಮರ್ಕೆಲ್ ಪ್ರತಿಕೃತಿಯನ್ನು ಗುದ್ದುವುದು. ಜೊತೆಗೆ 'ಮನಿ.. ಮನಿ..' ಎಂಬ ಸಂಗೀತಗಾರ ಅಬ್ಬಾನ ಹಾಡಿಗೆ ಕುಣಿಯುತ್ತಾನಂತೆ. 1997ರಲ್ಲೇ ಟ್ರಂಪ್ ಮೇಣದ ಪ್ರತಿಮೆಗೆ ಅಳತೆ ತೆಗೆದುಕೊಂಡಿದ್ದ ಅಲ್ಲಿಯ ಕೆಲಸಗಾರರು ಪ್ರತಿಮೆ ಮಾಡದೆ ಈ ರೀತಿ ಸೇಡು ತೀರಿಸಿಕೊಂಡಿದ್ದೇಕೊ!

ಕೊಲಂಬಿಯಾದಲ್ಲಿ ಉಷ್ಣಾಂಶದಲ್ಲಿ ಭಾರಿ ಏರಿಕೆಯಾಗಿದ್ದು, ಬಿಸಿ ಗಾಳಿ ಬೀಸುತ್ತಿದೆ. ತಜ್ಞರು ಎಚ್ಚರಿಕೆಯನ್ನೂ ನೀಡಿದ್ದಾರಂತೆ, ಈ ಸಂದರ್ಭದಲ್ಲಿ ಲೈಂಗಿಕ ಚಟುವಟಿಕೆ ನಡೆಸಬೇಡಿ ಎಂದು. ನಿರ್ಜಲೀಕರಣ ಆಗಬಹುದು ಎಂಬ ತಜ್ಞರ ಮುನ್ನೆಚ್ಚರಿಕೆಯೇನೋ ಸರಿ. ಆದರೆ ಏರ್ ಕಂಡೀಷ್ನರ್ ಮಾರಾಟ ಕಂಪೆನಿಗಳಿಗೆ ಸುಗ್ಗಿಯಂತೆ. ತಮ್ಮ ಬಳಿ ಇದಕ್ಕೆ ಪರಿಹಾರವಿದೆ ಎಂದು ಪ್ರಚಾರ ಮಾಡಿಕೊಳ್ಳುತ್ತಿದ್ದು, ತಜ್ಞರ ಎಚ್ಚರಿಕೆಯನ್ನು ಜನ ಬಿಸಿ ಗಾಳಿಗೆ ತೂರಿದ್ದಾರಂತೆ.



ಚೀನಾದಲ್ಲಿ ಇತ್ತೀಚೆಗೆ ನಡೆದ ಚೈನೀಸ್ ವ್ಯಾಲೆಂಟೈನ್ ದಿನಾಚರಣೆಯಂದು ವೃದ್ಧ ದಂಪತಿಗಳೇ ಮಿಂಚಿದರಂತೆ. ಪ್ರೀತಿ–ಪ್ರೇಮ, ಮದುವೆಯಲ್ಲಿ ಬದ್ಧತೆ ವಿಷಯ ಬಂದಾಗ ಗೆಲ್ಲುವವರು ಅವರೇ ತಾನೆ.



ಫ್ರಾನ್ಸ್‌ನಲ್ಲಿ ಎಲ್ಲೆಲ್ಲೂ ಸಾರ್ವಜನಿಕ ಮೂತ್ರಿಗಳನ್ನು ನಿರ್ಮಿಸಿದ್ದಾರಂತೆ. ಅದರಲ್ಲೂ ಪ್ರವಾಸಿಗರಿಂದ ಗಿಜಿಗುಟ್ಟುವ ಪ್ಯಾರಿಸ್‌ನಲ್ಲಿ ಇಂತಹ ಖುಲ್ಲಂ ಖುಲ್ಲಾ ಪರಿಸರ ಸ್ನೇಹಿ ಮೂತ್ರಿಗಳು ಬಹಳ ಜನಪ್ರಿಯವಂತೆ. ಹಾಗಾದರೆ ನಮ್ಮಲ್ಲಿ ರಸ್ತೆ ಬದಿ, ಕಾಂಪೌಂಡ್ ಒದ್ದೆ ಮಾಡುವುದು ನೂರಕ್ಕೆ ನೂರು ಪರಿಸರ ಸ್ನೇಹಿಯೇ!

ಅವಳಲ್ಲ, ಅವನು. ಚೀನಾದ ವಿಶ್ವವಿದ್ಯಾಲಯದ ವಿದ್ಯಾರ್ಥಿ ಜಿಯಾಂಗ್ ಶೆಂಗ್ ಎಂಬಾತ ಮೊಟ್ಟಮೊದಲ ಬಾರಿ ಮುಖಕ್ಕೆ ಮೇಕಪ್ ಮಾಡಿಕೊಂಡು ಹೋದನಂತೆ. ಈಗ ಇದು ಚಾಲೆಂಜ್ ತರಹ ಹಬ್ಬಿದ್ದು, ಪುರುಷರಲ್ಲೂ ಆತ್ಮವಿಶ್ವಾಸ ಮೂಡಿಸಲು ಮೇಕಪ್ ಅವಶ್ಯಕ ಎಂಬ ಸಿದ್ಧಾಂತಕ್ಕೆ ಬಂದಿದ್ದಾರಂತೆ. ಯಾವುದೋ ಸೌಂದರ್ಯವರ್ಧಕ ಉತ್ಪನ್ನಗಳ ಕಂಪನಿಯ ಲಾಬಿ ಇರಬಹುದು.



ಜಾರ್ಜಿಯ ವಿಶ್ವವಿದ್ಯಾನಿಲಯದ ಸಂಶೋಧಕರು ಇರುವೆಗಳ ಮೇಲೆ ಅಧ್ಯಯನ ನಡೆಸಿ ಈಗ ಮನುಷ್ಯರ ಮೇಲೂ ಜಾರಿಗೊಳಿಸುವಂತೆ ಸಲಹೆ ನೀಡಿದ್ದಾರಂತೆ. ಇರುವೆಗಳು ಗೂಡು ಕಟ್ಟುವಾಗ ಕೆಲವು ಇರುವೆಗಳು ಮಾತ್ರ ಸೋಮಾರಿತನದಿಂದ ಕಾಲ ಕಳೆಯುತ್ತವಂತೆ. ಕಟ್ಟಡ ಕಾರ್ಮಿಕ ಇರುವೆಗಳು ವಿಶ್ರಾಂತಿ ತೆಗೆದುಕೊಂಡಾಗ ಇವು ಆಲಸ್ಯ ಕಳೆದು ಡಬಲ್ ವೇಗದಲ್ಲಿ ಕೆಲಸ ಮಾಡುತ್ತವಂತೆ. ಅಂದರೆ ಸಂಸ್ಥೆಗಳಲ್ಲಿ ಕೆಲವರು ಮಾತ್ರ ಕೆಲಸದಲ್ಲಿ ತೊಡಗಿ, ಉಳಿದವರು ಸುಮ್ಮನೆ ಕಾಲ ಕಳೆಯುವ ರೀತಿಯನ್ನು ಭಾಗಶಃ ಇರುವೆಗಳಿಂದಲೇ ಕದ್ದಿರಬಹುದು.